**O.S.No.12/2008**
**DW-1**

**ದಿಃ 28.04.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ</u> 1, 3 ಮತ್ತು 4 ನೇ ಪ್ರತಿವಾದಿ ಪರ ಶ್ರೀ ವೈ.ಎಸ್.ಆರ್., ವಕೀಲರಿಂದ**

ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲ ಸಂಗತಿಗಳು ಸತ್ಯವಾಗಿದ್ದು, ಅವುಗಳನ್ನು ನಾನೇ ಹೇಳಿ ಬರೆಯಿಸಿ ಓದಿ ಸಹಿ ಮಾಡಿರುತ್ತೇನೆ.

ನಾನು ದಿಃ 07.09.2006 ರ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ಉಪ ಜಿಲ್ಲೆಗೆ ಸಂಬಂಧಿಸಿದ ಸ್ಥಿರಾಸ್ತಿಗಳ ಮಾರ್ಗಸೂಚಿ ಬೆಲೆಯ ಪರಿಷ್ಕೃತ ದರದ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಡಿ-1 ಎಂದು, ದಿಃ 20.02.2008 ರ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ಉಪ ಜಿಲ್ಲೆಗೆ ಸಂಬಂಧಿಸಿದ ಸ್ಥಿರಾಸ್ತಿಗಳ ಮಾರ್ಗಸೂಚಿ ಬೆಲೆಯ ಪರಿಷ್ಕೃತ ದರದ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಡಿ-2 ಎಂದು ಗುರುತಿಸಲಾಯಿತು.

**(ವಾದಿ ಪರ ವಕೀಲರು ಗೈರು ಹಾಜರಿದ್ದು ಅವಕಾಶ ನೀಡುವ ಸಲುವಾಗಿ, ಸಮಯ ನೀಡಿ ಮುಂದೂಡಲಾಗಿದೆ.)**

**(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸ ಇದೆ,**

**ಅಪರ ಸಿವಿಲ್ ನ್ಯಾ. ಮತ್ತು**
**ಜೆ.ಎಂ.ಎಫ್.ಸಿ, ದೊಡ್ಡಬಳ್ಳಾಪುರ**